# ಕಾರವಲ್

ESTD:1976

23. 11. 2022 ಬುಧವಾರ, ವೃಶ್ಚಿಕ 7


## ಒಂದು ಕೈ ನಷ್ಟಗೊಂಡ ಬಾಲಕನ ಸಂಕಷ್ಟ ಜೀವನ

ಫುಟ್ಬಾಲ್ ಆಟದ ವೇಳೆ ಬಿದ್ದು ಗಾಯಗೊಂಡು ಮೂಳೆ ಮುರಿತಕ್ಕೊಳಗಾದ 17ರ ಹರೆಯದ ಸುಲ್ತಾನ್ ಬಿನ್ ಸಿದ್ದಿಖ್‌ನ ಎಡದ ಕೈ ಗಂಟಿನ ಕೆಳಗೆ ಕತ್ತರಿಸಿ ತೆಗೆದ ಘಟನೆ ಕೇರಳದ ಜನರು ಭಾರೀ ದುಃಖಿಸುವಂತದ್ದಾಗಿದೆ. ಮನೆ ಸಮೀಪದ ಮೈದಾನದಲ್ಲಿ ಫುಟ್ಬಾಲ್ ಆಟವಾಡುತ್ತಿರುವ ಮಧ್ಯೆ ಈ 17ರ ಹರೆಯದ ಬಾಲಕನ ಜೀವನವನ್ನೇ ಬದಲಾಯಿಸಿದ ದುರಂತ ಘಟನೆ ಸಂಭವಿಸಿದೆ. ಗಾಯಗೊಂಡ ಬಾಲಕನನ್ನು ಮೊದಲು ತಲಶ್ಶೇರಿ ಜನರಲ್ ಆಸ್ಪತ್ರೆಗೆ ತಲುಪಿಸಿದ್ದು, ಅಲ್ಲಿನ ವೈದ್ಯರು ತಪಾಸಣೆ ನಡೆಸಿದ್ದಾರೆ. ಎಕ್ಸ್‌ರೇ ತೆಗೆಯುವಂತೆ ವೈದ್ಯರು ಸೂಚಿಸಿದ್ದರೂ ಅದಕ್ಕೆ ಬೇಕಾದ ಸೌಕರ್ಯ ಆ ಸರಕಾರಿ ಆಸ್ಪತ್ರೆಯಲ್ಲಿರಲಿಲ್ಲ. ಆದ್ದರಿಂದ ತುಂಡಾದ ಕೈಯೊಂದಿಗೆ ಮಗನನ್ನು ಕರೆದುಕೊಂಡು ತಂದೆ ನಗರದಲ್ಲೇ ಇರುವ ಸಹಕಾರಿ ಆಸ್ಪತ್ರೆಗೆ ತಲುಪಿ ಎಕ್ಸ್‌ರೇ ತೆಗೆದಾಗ ಕೈಯ ಎರಡು ಎಲುಬುಗಳು ಬಿರುಕು ಬಿಟ್ಟಿರುವುದಾಗಿ ಪತ್ತೆಹಚ್ಚಲಾಯಿತು. ವೈದ್ಯರು ಬ್ಯಾಂಡೇಜ್ ನಡೆಸಿದ್ದು ಮರುದಿನ ಮೂಳೆ ರೋಗ ತಜ್ಞರನ್ನು ಕಾಣುವಂತೆ ಸಲಹೆ ನೀಡಿದ್ದಾರೆ. ಅದರಂತೆ ತಪಾಸಣೆಗೆ ಒಳಗಾದಾಗ ಶಸ್ತ್ರಚಿಕಿತ್ಸೆ ನಡೆಸುವಂತೆ ತಿಳಿಸಿದರು. ಈ ಮಧ್ಯೆ ಕೈಯ ನೋವು ಹೆಚ್ಚಿದ್ದು, ಬಾಲಕನಿಗೆ ಸಹಿಸಲು ಸಾಧ್ಯವಾಗದ ಸ್ಥಿತಿಯುಂಟಾಯಿತು. ಈ ಮೊದಲು ತಿಳಿಸಿದಂತೆ ಶಸ್ತ್ರ ಚಿಕಿತ್ಸೆ ನಡೆಸಿದರೆ ಕೈಯ ನಷ್ಟಗೊಂಡ ರಕ್ತ ಸಂಚಾರವನ್ನು 90 ಶೇಕಡಾ ಸರಿಪಡಿಸಬಹುದೆಂದು ವೈದ್ಯರು ತಿಳಿಸಿದರು. ಎರಡು ವಾರ ಕಾಲ ಜನರಲ್ ಆಸ್ಪತ್ರೆಯಲ್ಲೇ ಚಿಕಿತ್ಸೆ ಮುಂದುವರಿಸಿದರೂ ಕೊನೆಗೆ ವೈದ್ಯರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಾಲಕನನ್ನು ಕಲ್ಲಿಕೋಟೆಯ ಮೆಡಿಕಲ್ ಕಾಲೇಜಿಗೆ ತಲುಪಿಸುವಂತೆ ತಿಳಿಸಲಾಯಿತು. ಅದಕ್ಕೆ ಕಾರಣವಾಗಿ ತಿಳಿಸಿರುವುದು ಕೈಯ ಗಾಯ ಒಣಗಿ ಪೂರ್ವ ಸ್ಥಿತಿಗೆ ಬದಲಾಗಲು ಶರೀರದ ಇತರ ಭಾಗದಿಂದ ಮಾಂಸ ತೆಗೆದು ಪ್ಲಾಸ್ಟಿಕ್ ಸರ್ಜರಿ ನಡೆಸಬೇಕಾಗಿದೆ ಎಂದಾಗಿದೆ. ಆದರೆ ಅದಕ್ಕೆ ಬೇಕಾದ ಸೌಕರ್ಯ ಇಲ್ಲಿಲ್ಲವೆಂದು ತಿಳಿಸಲಾಗಿತ್ತು.

ತಂದೆ ಮಗನನ್ನು ಕರೆದುಕೊಂಡು ಕಲ್ಲಿಕೋಟೆ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ತಲುಪಿದರು. ಡಾಕ್ಟರ್ ತಪಾಸಣೆಗೈದು ಶಸ್ತ್ರ ಚಿಕಿತ್ಸೆ ಬೇಕಾಗಿ ಬರಲಿದೆಯೆಂದೂ ಒಂದು ವೇಳೆ ಕೈಯನ್ನೇ ಕತ್ತರಿಸಿ ತೆಗೆಯಬೇಕಾಗಲಿದೆ ಎಂದು ತಿಳಿಸಿದರು. ವೈದ್ಯರ ಈ ನಿರ್ದೇಶವನ್ನು ಕೇಳಿ ಬಾಲಕ ಹಾಗೂ ತಂದೆ ಬೆಚ್ಚಿ ಬಿದ್ದಿದ್ದಾರೆ. ಅದೇ ದಿನದಂದು ಈ ಇಬ್ಬರು ಕಲ್ಲಿಕೋಟೆಯ ಖಾಸಗಿ ಆಸ್ಪತ್ರೆಗೆ ತಲುಪಿ ತಜ್ಞ ವೈದ್ಯರನ್ನು ಭೇಟಿಯಾದರೂ ಅವರು ಕೂಡಾ ಸರಕಾರಿ ವೈದ್ಯರು ತಿಳಿಸಿದುದನ್ನೇ ಆವರ್ತಿಸಿದರು. ಕೈ ಕತ್ತರಿಸಿ ತೆಗೆಯಲು ಮನಸ್ಸಾಗದ ಹಿನ್ನೆಲೆಯಲ್ಲಿ ಆ ತಂದೆ ಹಾಗೂ ಮಗ ಕೊಯಂಬತ್ತೂರಿನ ಆಸ್ಪತ್ರೆಗೆ ತೆರಳಿದರು. ಆದರೆ ಅಲ್ಲಿ ಕೂಡಾ ವೈದ್ಯರು ತಿಳಿಸಿರುವುದು ಅದನ್ನೇ ಆಗಿದೆ. ಕೊನೆಗೆ ಅನ್ಯ ದಾರಿಯಿಲ್ಲದೆ ಅವರು ಕಣ್ಣೂರಿನ ಖಾಸಗಿ ಆಸ್ಪತ್ರೆಗೆ ತಲುಪಿ ಕೈಯನ್ನು ಕತ್ತರಿಸಿ ತೆಗೆಯಬೇಕಾಗಿ ಬಂತು.

ಒಂದು ಕೈ ನಷ್ಟಗೊಂಡಾಗಲೇ ಅದರ ನೋವು ಏನೆಂದು ತಿಳಿಯಬಹುದಾಗಿದೆ. ಎರಡು ಕೈಗಳು ಇದ್ದರೂ ಜೀವಿಸಲು ಭಾರೀ ಕಷ್ಟ ಪಡುವವರ ಜತೆಯಲ್ಲಿ ಒಂದು ಕೈ ಕಳೆದುಕೊಂಡ ಈ ಬಾಲಕನ ಸ್ಥಿತಿ ಹೇಗಾಗಿರಬಹುದು? ಈ ಬಾಲಕನಿಗೆ ಉಂಟಾದ ದುರ್ಗತಿ ಯಾರ ಲೋಪದಿಂದ ಸಂಭವಿಸಿದೆ? ಯಾರು ಅದಕ್ಕೆ ಹೊಣೆಗಾರರು? ಏನೇ ಆದರೂ ಇದೊಂದು ಭಾರೀ ದುಃಖದ ವಿಷಯವಾಗಿದೆ. ಅಗತ್ಯದ ಚಿಕಿತ್ಸೆ ಲಭಿಸದಿರುವುದೇ ಈ ಬಾಲಕನ ಕೈ ನಷ್ಟಗೊಳ್ಳಲು ಕಾರಣವಾಗಿದ್ದರೆ ಅದು ತೀರ ಅಪರಾಧವೇ ಆಗಿದೆ. ಆ ಅಪರಾಧಕ್ಕೆ ಕಾರಣರಾದವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಂಡು ಅಗತ್ಯದ ನಷ್ಟ ಪರಿಹಾರ ವಸೂಲು ಮಾಡಬೇಕಾಗಿದೆ. ಬಾಲಕನ ಮುಂದಿನ ಜೀವನ ಸುರಕ್ಷಿತವಾಗಿರಲು ಸರಕಾರ ಉದ್ಯೋಗ ನೀಡಬೇಕಾಗಿದೆ. ಆದ್ದರಿಂದ ಘಟನೆ ಕುರಿತು ಸಮಗ್ರ ತನಿಖೆ ನಡೆಸಬೇಕಾಗಿದೆ.

## ನಕಲಿ ಆನ್‌ಲೈನ್ ಸೇವಾ ಕೇಂದ್ರಗಳ ಪತ್ತೆಗೆ ನಿರೀಕ್ಷಣಾ ಸಮಿತಿ ರಚನೆ: ಜಿಲ್ಲಾಧಿಕಾರಿ

ಕಾಸರಗೋಡು: ಅಕ್ಷಯ ಕೇಂದ್ರಗಳ ಸೇವೆ ಒದಗಿಸುತ್ತಿರುವ ನಕಲಿ ಆನ್‌ಲೈನ್ ಸೇವಾ ಕೇಂದ್ರಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಭಂಡಾರಿ ಸ್ವಾಗತ್ ರಣ್‌ವೀರ್ ಚಂದ್ ತಿಳಿಸಿದ್ದಾರೆ. ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಆನ್‌ಲೈನ್ ಕೇಂದ್ರಗಳನ್ನು ನಿಯಂತ್ರಿಸಲು ವಿಶೇಷ ಸಮಿತಿ ರಚಿಸಲಾಗುವುದು. ರಾಜ್ಯ ಸರಕಾರದ ಅಧೀನದಲ್ಲಿರುವ ಅಕ್ಷಯ ಕೇಂದ್ರಗಳ ಸೇವೆಯನ್ನು ಖಾಸಗಿ ಆನ್‌ಲೈನ್ ಕೇಂದ್ರಗಳು ನೀಡುತ್ತಿರುವುದು ಗಮನಕ್ಕೆ ಬಂದಿದ್ದು, ಅಂತಹ ಕೇಂದ್ರಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ. ಅಂತಹ ಆನ್‌ಲೈನ್ ಕೇಂದ್ರಗಳಲ್ಲಿ ಸರಕಾರಿ ವ್ಯವಸ್ಥೆಯ ಮೂಲಕ ಒದಗಿಸುವ ಸೇವೆಗಳನ್ನು ಒದಗಿಸುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಪಂಚಾಯತ್ ಮಟ್ಟದಲ್ಲಿ ಶಾಶ್ವತ ಮೇಲ್ವಿಚಾರಣಾ ಸಮಿತಿ ರಚಿಸಲಾಗುವುದು. ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಉಪ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಗ್ರಾಮ ಅಧಿಕಾರಿಗಳು, ಪಂಚಾಯತ್ ಕಾರ್ಯದರ್ಶಿ ಮತ್ತು ಪೊಲೀಸ್ ನೇತೃತ್ವದಲ್ಲಿ ಸಮಿತಿ ಕಾರ್ಯ ನಿರ್ವಹಿಸಲಿದೆ. ಸಮಿತಿಯು ತನ್ನ ತನಿಖಾ ವರದಿಯನ್ನು ನಾಲ್ಕು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಿದೆ.

ಅಕ್ಷಯದ 20ನೇ ವಾರ್ಷಿಕೋತ್ಸವ ಕಾರ್ಯಕ್ರಮದ ಭಾಗವಾಗಿ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಭಂಡಾರಿ ಸ್ವಾಗತ್ ರಣ್‌ವೀರ್ ಚಂದ್ ಅಕ್ಷಯ ಉದ್ಯಮಿಗಳೊಂದಿಗೆ ಸಂವಾದ ನಡೆಸಿದರು. ಜಿಲ್ಲಾಧಿಕಾರಿಗಳು ಎಲ್ಲ ಉದ್ಯಮಿಗಳಿಗೆ ಪ್ರಮಾಣ ಪತ್ರ ವಿತರಿಸಿ ಅಕ್ಷಯ ದಿನದ ಸಂದೇಶ ನೀಡಿದರು. ಪೋಸ್ಟರ್ ಹಸ್ತಾಂತರ ಕಾರ್ಯಕ್ರಮವು ನಡೆಯಿತು. ರಾಜ್ಯ ಐಟಿ ಮಿಷನ್ ಡಿ.ಪಿ.ಎಂ.ಎಸ್ ನಿವೇದ್ ವರದಿ ಮಂಡಿಸಿದರು. ಅಕ್ಷಯ ಇಪ್ಪತ್ತನೇ ವಾರ್ಷಿಕೋತ್ಸವವನ್ನು ಎಡಿಎಂಎ ಕೆ. ರಮೇಂದ್ರನ್ ಉದ್ಘಾಟಿಸಿದರು. ಹಣಕಾಸು ಅಧಿಕಾರಿ ಶಿವಪ್ರಕಾಶನ್ ನಾಯರ್ ಅಧ್ಯಕ್ಷತೆ ವಹಿಸಿದ್ದರು. ಪಡಿತರ ನಿರೀಕ್ಷಕ ಜಿ. ಪ್ರಕಾಶ್ ಪಿಳ್ಳೈ, ಉಪ ತಹಶೀಲ್ದಾರ್ ತುಳಸಿ ರಾಜ್, ಐಟಿ ಸಂಯೋಜಕ ಉಮ್ಮರ್ ಫಾರೂಕ್ ಮಾತನಾಡಿದರು. ಕೆ. ಪುಷ್ಪಲತಾ ಸ್ವಾಗತಿಸಿ, ಬಿ. ಸಂತೋಷ್ ಕುಮಾರ್ ವಂದಿಸಿದರು.



# ಸರಣಿ ಹಲ್ಲು ಕೀಳುವಿಕೆ



●ಡಾ.ಮುರಲೀ ಮೋಹನ್
ಚೂಂತಾರು, ಹೊಸಂಗಡಿ.

ಸರಣಿ ಹಲ್ಲು ಕೀಳುವಿಕೆ ಎನ್ನುವುದು ಒಂದು ವಿಶೇಷವಾದ ಪೂರ್ವ ನಿರ್ಧಾರಿತ ಹಲ್ಲು ಕೀಳುವಿಕೆಯಾಗಿದ್ದು, ನಿಗದಿತವಾದ ಕ್ರಮಾಂಕದಲ್ಲಿ ನಿಗದಿತ ಹಲ್ಲುಗಳನ್ನು ನಿರ್ದಿಷ್ಟ ಸಮಯದಲ್ಲಿ ಕಿತ್ತು, ಮುಂದೆ ಬರಲಿರುವ ಶಾಶ್ವತ ಹಲ್ಲುಗಳಿಗೆ ಸರಿಯಾದ ಜಾಗ ಮಾಡಿಕೊಡುವ ವಿಶೇಷ ಪ್ರಕ್ರಿಯೆಯಾಗಿರುತ್ತದೆ. ಸ್ವೀಡನ್ ದೇಶದ ಕೆಲ್‌ಗ್ರೇನ್ ಎಂಬಾತ ಮೊದಲ ಬಾರಿಗೆ ಸೀರಿಯಲ್ ಎಕ್ಸ್ಟ್ರಾಕ್ಷನ್ ಎಂಬ ಪದ ಬಳಸಿದವನು. ಮುಂದೆ 1940 ರಲ್ಲಿ ಅಮೇರಿಕಾದಲ್ಲಿ ಹೇಸ್ ನಾನ್ಸ್ ಎಂಬಾತ ಇದನ್ನೆ ಯೋಜಿತ ಮತ್ತು ಮುಂದಾಲೋಚನೆಯ ಹಲ್ಲು ಕೀಳುವಿಕೆ ಎಂಬ ಶಬ್ದವನ್ನು ಬಳಸಿ, ಈ ಸರಣಿ ಹಲ್ಲು ಕೀಳುವಿಕೆಯನ್ನು ಹೆಚ್ಚು ಪ್ರಸಿದ್ಧಿ ಮತ್ತು ಪ್ರಚಲಿತವಾಗುವಂತೆ ಮಾಡಿದನು. ಈ ಕಾರಣದಿಂದಲೇ ನಾನ್ಸ್ ಅವರನ್ನು "ಸರಣಿ ಹಲ್ಲು ಕೀಳುವಿಕೆಯ ಪಿತಾಮಹ" ಎಂದೂ ಕರೆಯುತ್ತಾರೆ.

ಏನಿದು ಸರಣಿ ಹಲ್ಲು ಕೀಳುವಿಕೆ?

ಸಾಮಾನ್ಯವಾಗಿ ಹಲ್ಲು ಕೀಳುವುದು ಹಲ್ಲು ದಂತ ಕ್ಷಯದಿಂದ ಹಾಳಾಗಿ ಹಲ್ಲು ನೋವು ಬಂದಾಗ ಮಾತ್ರ. ಅಷ್ಟಕ್ಕೂ ಹಲ್ಲು ನೋವು ಬಂದು ಹಲ್ಲು ಪೂರ್ತಿ ಕ್ಷಯಿಸಿ ಹೋಗಿ, ಬೇರುನಾಳ ಚಿಕಿತ್ಸೆ ಮಾಡಲು ಸಾಧ್ಯವಾಗದಿದ್ದಲ್ಲಿ ಮಾತ್ರ ಹಲ್ಲು ತೆಗೆಯಲಾಗುತ್ತದೆ. ಆದರೆ ಈ ಸರಣಿ ಹಲ್ಲು ಕೀಳುವಿಕೆಯಲ್ಲಿ ದಂತ ಕ್ಷಯವಾಗದ ಹಲ್ಲುಗಳನ್ನೂ ಕೀಳಲಾಗುತ್ತದೆ. ಸಾಮಾನ್ಯವಾಗಿ 8 ರಿಂದ 12 ರ ವಯಸ್ಸಿನಲ್ಲಿ ಈ ಪ್ರಕ್ರಿಯೆ ಮಾಡಲಾಗುತ್ತದೆ. ಇದೊಂದು ಬಹಳ ಪೂರ್ವ ನಿಯೋಜಿತ, ಪೂರ್ವ ನಿರ್ಧಾರಿತ ಮತ್ತು ಸಾಕಷ್ಟು ವಿಚಾರಗಳನ್ನು ಮಾಡಿಯೇ ಮಾಡುವ ಕೆಲಸವಾಗಿರುತ್ತದೆ. ಇದರಲ್ಲಿ ಹಾಲು ಹಲ್ಲು ಮತ್ತು ಶಾಶ್ವತ ಹಲ್ಲು ಎರಡನ್ನೂ ಕೀಳಲಾಗುತ್ತದೆ. ನಿಗದಿತ ಸರದಿಯಲ್ಲಿ ಹಲ್ಲು ಕಿತ್ತು ಮುಂದೆ ಹುಟ್ಟಲಿರುವ ಶಾಶ್ವತ ಹಲ್ಲುಗಳಿಗೆ ಬರಲು ಜಾಗ ಮಾಡಿಕೊಡುವ ಪ್ರಕ್ರಿಯೆ ಇದಾಗಿರುತ್ತದೆ. ಈ ಸರಣಿ ಹಲ್ಲು ಕೀಳುವಿಕೆಯನ್ನು ದಂತ ವೈದ್ಯರು, ಮಕ್ಕಳ ಹಲ್ಲಿನ ತಜ್ಞರು ಮತ್ತು ವಕ್ರದಂತ ತಜ್ಞರು ಒಟ್ಟು ಗೂಡಿ ಸಾಕಷ್ಟು ಅಧ್ಯಯನ ಮಾಡಿ ಮಾಡುತ್ತಾರೆ. ಇದರಲ್ಲಿ ನಾಲ್ಕಾರು ರೀತಿಯ ತಂತ್ರಗಳಿದೆ.

ಯಾವ ಮಗುವಿಗೆ ಯಾವ ರೀತಿಯ ಸರಣಿಯಲ್ಲಿ ಯಾವ ಹಲ್ಲು ಕೀಳಬೇಕು, ಯಾವಾಗ ಕೀಳಬೇಕು ಎಂಬುದನ್ನು ದಂತ ವೈದ್ಯರೇ ನಿರ್ಧರಿಸುತ್ತಾರೆ. ಈ ಸರಣಿ ಹಲ್ಲು ಕೀಳುವಿಕೆಯಲ್ಲಿ ಎರಡು ಹಾಲು ಹಲ್ಲು ಮತ್ತು ಒಂದು ಶಾಶ್ವತ ಹಲ್ಲನ್ನು ಕೀಳಲಾಗುತ್ತದೆ. ಒಟ್ಟು ಮೂರು ಹಲ್ಲನ್ನು ಕೀಳಲಾಗುತ್ತದೆ. ಯಾವ ಹಲ್ಲು ಯಾವ ವಯಸ್ಸಿಗೆ ಬಾಯಿಯಲ್ಲಿ ಮೂಡುತ್ತದೆ ಎಂಬ ಸಾಮಾನ್ಯ ಜ್ಞಾನದ ನೆರವಿನಿಂದ ಸುಮಾರು 8 ರಿಂದ 9 ರ ವಯಸ್ಸಿನಲ್ಲಿ ಕೋರೆ ಹಾಲು ಹಲ್ಲುಗಳನ್ನು ಮೊದಲಾಗಿ ಕೀಳಲಾಗುತ್ತದೆ. ಹೀಗೆ ಮಾಡುವುದರಿಂದ ಶಾಶ್ವತ ಬಾಚಿ ಹಲ್ಲುಗಳು ಸರಿಯಾದ ಜಾಗದಲ್ಲಿ ಮೂಡಲು ಜಾಗವನ್ನು ಸೃಷ್ಟಿಸುತ್ತದೆ ಎಂದು ನಂಬಲಾಗಿದೆ. ಹೀಗೆ ಮಾಡುವುದರಿಂದ ಶಾಶ್ವತ ಬಾಚಿ ಹಲ್ಲುಗಳು ಸರಿಯಾದ ಜಾಗದಲ್ಲಿ ಹುಟ್ಟುತ್ತದೆ ಮತ್ತು ಅವುಗಳು ಹುಟ್ಟಲು ಸಾಕಷ್ಟು ಜಾಗ ಸಿಗುತ್ತದೆ. ಇದಾದ ಒಂದು ವರ್ಷದ ಬಳಿಕ ಮೊದಲನೇ ದವಡೆ ಹಾಲು ಹಲ್ಲನ್ನು ಕೀಳಲಾಗುತ್ತದೆ. ಹೀಗೆ ಮಾಡುವುದರಿಂದ ಶಾಶ್ವತ ಕೋರೆ ಹಲ್ಲಿಗಿಂತ ಬಹಳ ಮೊದಲೇ ಮೊದಲನೇ ಮುಂದವಡೆ ಹಲ್ಲು ಹುಟ್ಟಲು (ಪ್ರೀಮೋಲಾರ್) ಜಾಗ ಮಾಡಿಕೊಡಲಾಗುತ್ತದೆ. ಹೀಗೆ ಬೇಗನೆ ಹುಟ್ಟಿದ ಮೊದಲನೇ ಮುಂದವಡೆ ಶಾಶ್ವತ ಎಲ್ಲವನ್ನೂ ಮುಂದೆ ಶಾಶ್ವತ ಕೋರೆಹಲ್ಲು ಹುಟ್ಟುವ ಸಮಯದಲ್ಲಿ ಕೀಳಲಾಗುತ್ತದೆ. ಹೀಗೆ ಮೊದಲನೇ ಶಾಶ್ವತ ಮುಂದವಡೆ ಹಲ್ಲು ಕಿತ್ತಾಗ ಶಾಶ್ವತ ಕೋರೆ ಹಲ್ಲುಗಳಿಗೆ ಸರಿಯಾದ ಜಾಗ ಮತ್ತು ದಿಶೆ ಸಿಕ್ಕಿ ಸರಿಯಾದ



ಜಾಗದಲ್ಲಿ ಹಲ್ಲುಗಳು ಹುಟ್ಟುತ್ತದೆ. ಇದನ್ನೇ ಸರಣಿ ಹಲ್ಲು ಕೀಳುವಿಕೆ ಎನ್ನುತ್ತಾರೆ. ಹೀಗೆ ಮಾಡುವುದರಿಂದ ಹಲ್ಲುಗಳು ವಕ್ರವಾಗಿ ಹುಟ್ಟುವುದನ್ನು ತಪ್ಪಿಸಬಹುದಾಗಿದೆ. ಈ ಸರಣಿ ಹಲ್ಲು ಕೀಳುವಿಕೆಯನ್ನು ಸುಮಾರು 8 ರಿಂದ 11 ವರ್ಷಗಳ ನಡುವೆ ಮಾಡುತ್ತಾರೆ.

**ಪ್ರಯೋಜನಗಳು ಏನು?**

ಇದೊಂದು ರೀತಿಯ ನೈಸರ್ಗಿಕವಾದ ಜನಸ್ನೇಹಿಯಾದ ತಂತ್ರವಾಗಿದ್ದು, ಹಲ್ಲು ಹುಟ್ಟುವ ಸಮಯ ಮತ್ತು ಹಲ್ಲುಗಳು ಹುಟ್ಟಿದ ಆರ್ಡರ್ ಅಥವಾ ಅನುಕ್ರಮಗಳ ಆಧಾರದಲ್ಲಿ ಮಾಡುವ ಚಿಕಿತ್ಸೆ ಆಗಿರುತ್ತದೆ.

1) ಮಗುವಿನ ಆತ್ಮವಿಶ್ವಾಸ ಹೆಚ್ಚುತ್ತದೆ. ಸಣ್ಣ ವಯಸ್ಸಿನಲ್ಲಿ ಹಲ್ಲುಗಳು ಅಡ್ಡಾದಿಡ್ಡಿಯಾಗಿ ಬೆಳೆದು ಮಗುವಿಗೆ ಮಾನಸಿಕವಾಗಿ ಜರ್ಜರಿತವಾಗದಂತೆ ರಕ್ಷಿಸುತ್ತದೆ.
2) ಮುಂದೆ ವಕ್ರದಂತ ಚಿಕಿತ್ಸೆ ಬೇಕಾದರೂ ಅದರ ಚಿಕಿತ್ಸೆಯ ಅವಧಿಯನ್ನು ಕಡಿಮೆ ಮಾಡುತ್ತದೆ.
3) ಕಡಿಮೆ ಖರ್ಚಿನ ಚಿಕಿತ್ಸೆಯಾಗಿರುತ್ತದೆ.
4) ಹೆಚ್ಚಿನ ಸಂದರ್ಭಗಳಲ್ಲಿ ಬಹಳ ಉತ್ತಮ ಫಲಿತಾಂಶ ಸಿಗುತ್ತದೆ ಮತ್ತು ಮಗುವಿನ ಬೆಳವಣಿಗೆಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.
5) ಮಕ್ಕಳ ಬಾಯಿಯ ಆರೋಗ್ಯ ವೃದ್ಧಿಸುತ್ತದೆ. ದಂತಕ್ಷಯದ ಸಾಧ್ಯತೆಯನ್ನು ಕ್ಷೀಣಿಸುತ್ತದೆ.
6) ಕಡಿಮೆ ಅವಧಿಯ ಚಿಕಿತ್ಸೆ ಇದಾಗಿದ್ದು, ಮಗು ನಿರಂತರವಾಗಿ ದಂತ ವೈದ್ಯರ ಬಳಿ ಕಾಲಕಾಲಕ್ಕೆ ನಿಯಮಿತವಾಗಿ ಬರಲೇಬೇಕಾದ ಅನಿವಾರ್ಯತೆಯಿಂದಾಗಿ ಮಕ್ಕಳ ಬಾಯಿಯ ಆರೋಗ್ಯ ಉನ್ನತ ಮಟ್ಟದಲ್ಲಿರುವಂತೆ ಮಾಡುತ್ತದೆ.

**ತೊಂದರೆಗಳು:**

1) ರೋಗಿಗಳು ನಿರಂತರವಾಗಿ 8 ರಿಂದ 11 ವರ್ಷದ ಅವಧಿಗೆ ದಂತ ವೈದ್ಯರ ಬಳಿಗೆ 4 ವರ್ಷಗಳ ಕಾಲ ಬರಲೇಬೇಕು.
2) ಈ ಸರಣಿ ಹಲ್ಲು ಕೀಳುವಿಕೆಯಲ್ಲಿ ದಂತಕ್ಷಯವಾಗದ ಹಲ್ಲನ್ನು ಕೀಳಲಾಗುತ್ತದೆ ಮತ್ತು ಇದರಲ್ಲಿ ಹಲವಾರು ತಂತ್ರಗಳಿದ್ದು ಯಾವ ಮಗುವಿಗೆ ಯಾವ ರೀತಿಯ ತಂತ್ರ ಬಳಸಬೇಕು ಎಂದು ಮಗುವಿನ ಹಲ್ಲಿನ ಗಾತ್ರ, ದವಡೆಗಾತ್ರ ಮತ್ತು ದಂತ ಕ್ಷ ಕಿರಣ ತೆಗೆದ ನಂತರವೇ ನಿರ್ಧರಿಸಬೇಕಾಗುತ್ತದೆ. ಕೆಲವೊಮ್ಮೆ ನಿಗಧಿತ ಹಲ್ಲುಗಳಿಗಿಂತ ಬೇರೆ ಹಲ್ಲನ್ನೂ ಕೀಳಬೇಕಾಗಬಹುದು.
3) ಮಕ್ಕಳ ಸಹಭಾಗಿತ್ವ ಮತ್ತು ಹೆತ್ತವರ ಸಹಕಾರ ಈ ಚಿಕಿತ್ಸೆಗೆ ಅತೀ ಅಗತ್ಯ.

ಸರಣಿ ಹಲ್ಲು ಕೀಳುವಿಕೆ ಎನ್ನುವುದು ಒಂದು ಪೂರ್ವ ನಿರ್ಧಾರಿತ ಮತ್ತು ಪೂರ್ವ ನಿಗದಿತ ಪ್ರಕ್ರಿಯೆಯಾಗಿದ್ದು ಮಕ್ಕಳು, ಹೆತ್ತವರು ಮತ್ತು ವೈದ್ಯರ ನಡುವೆ ಸಾಕಷ್ಟು ಸಂವಹನ ಮತ್ತು ಹೊಂದಾಣಿಕೆ ಇರಬೇಕಾಗುತ್ತದೆ. ಎಲ್ಲಾ ಮಕ್ಕಳಿಗೂ ಈ ಸರಣಿ ಹಲ್ಲು ಕೀಳುವಿಕೆ ಬೇಕಾಗುವುದಿಲ್ಲ. ಮಗುವಿನ ಹಲ್ಲಿನ ಗಾತ್ರ, ಹಲ್ಲಿನ ವಯಸ್ಸು, ಜೈವಿಕ ವಯಸ್ಸು, ದವಡೆಗಾತ್ರ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ನಿರ್ಧರಿಸಲಾಗುತ್ತದೆ. ಸರಿಯಾದ ಸಮಯದಲ್ಲಿ ತಜ್ಞ ದಂತವೈದ್ಯರು ಮತ್ತು ವಕ್ರದಂತ ತಜ್ಞರ ಮಾರ್ಗದರ್ಶನದಲ್ಲಿ ಈ ಸರಣಿ ಹಲ್ಲು ಕೀಳುವಿಕೆ ಪ್ರಕ್ರಿಯೆ ನಡೆದಲ್ಲಿ ಮಕ್ಕಳ ಶಾಶ್ವತ ಹಲ್ಲುಗಳು ಮೂಡುವ ಸಮಯದಲ್ಲಿ ಸಾಕಷ್ಟು ಜಾಗ ದೊರಕಿ ಅವುಗಳು ಅದರ ಜಾಗದಲ್ಲಿಯೇ ಬರುವ ಸಾಧ್ಯತೆ ಹೆಚ್ಚಾಗುತ್ತದೆ ಮತ್ತು ಮುಂದೆ ವಕ್ರದಂತ ಚಿಕಿತ್ಸೆಯ ಅಗತ್ಯ ಇರುವುದಿಲ್ಲ. ಈ ಮೊದಲೇ ತಿಳಿಸಿದಂತೆ ಎಲ್ಲಾ ಮಕ್ಕಳಿಗೂ ಈ ಚಿಕಿತ್ಸೆ ಅಗತ್ಯವಿಲ್ಲ. ಅಧ್ಯಯನಗಳ ಪ್ರಕಾರ 10 ಶೇಕಡಾ ಮಕ್ಕಳಿಗೆ ಇದರ ಅವಶ್ಯಕತೆ ಇರುತ್ತದೆ ಎಂದು ತಿಳಿದುಬಂದಿದೆ. ಮೇಲಿನ ದವಡೆ ಮತ್ತು ಕೆಳಗಿನ ದವಡೆ ಎರಡರಲ್ಲೂ ಈ ಸರಣಿ ಹಲ್ಲು ಕೀಳುವಿಕೆ ಮಾಡಬಹುದಾಗಿದ್ದು, ಹೆಚ್ಚಾಗಿ ಮೇಲಿನ ದವಡೆಯಲ್ಲಿ ಇದರ ಅಗತ್ಯ ಇರುತ್ತದೆ. ಆದರೆ ಶಾಶ್ವತ ಹಲ್ಲುಗಳು ದವಡೆಯಲ್ಲಿ ಇಲ್ಲದೇ ಇದ್ದ ಪಕ್ಷದಲ್ಲಿ ಈ ಸರಣಿ ಹಲ್ಲು ಕೀಳುವಿಕೆ ಮಾಡಲೇ ಬಾರದು. ಈ ಕಾರಣದಿಂದ ಸರಣಿ ಹಲ್ಲು ಕೀಳುವಿಕೆಯನ್ನು ಮಾಡಲು ದಂತ ಕ್ಷ ಕಿರಣ ಪರೀಕ್ಷೆ ಅತೀ ಅಗತ್ಯ. ಈ ಸರಣಿ ಹಲ್ಲು ಕೀಳುವಿಕೆ ಪ್ರಕ್ರಿಯೆಗೆ 4 ರಿಂದ 5 ವರ್ಷಗಳ ಕಾಲ ದಂತ ವೈದ್ಯರ ಮೇಲುಸ್ತುವಾರಿ ಅತೀ ಅಗತ್ಯ. ಸರಿಯಾದ ಮಾರ್ಗದರ್ಶನ ಇಲ್ಲದೆ ಈ ಪ್ರಕ್ರಿಯೆ ಮಾಡಿದಲ್ಲಿ ಹಲ್ಲುಗಳು ಓರೆಕೋರೆಯಾಗಿ ಬೆಳೆದು ಮತ್ತಷ್ಟು ಹೆಚ್ಚಿನ ಸಮಸ್ಯೆಗಳಿಗೆ ಕಾರಣವಾಗಲೂಬಹುದು.

# ಅನುಪಮಾ ರಾಘವೇಂದ್ರರ ‘ತಲ್ಲಣಗಳ ಪಲ್ಲವಿ’

ಕೃತಿ ಪರಿಚಯ




• ಧನ್ಯಶ್ರೀ ಸರಳಿ

ಅನುಪಮಾ ಉಡುಪುಮೂಲೆಯವರು ಕಾಸರಗೋಡಿನ ಸಾಹಿತ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವವರು. ನಾಟ್ಯವಿದುಷಿಯಾದ ಈಕೆ ಕಥೆ, ನಾಟ್ಯರಂಗದ ಬಗೆಗಿನ ಹಲವು ಲೇಖನಮಾಲೆಗಳನ್ನು ಸಮರ್ಥವಾಗಿ ಬರೆದಿರುವವರು. ಕನ್ನಡ ಹಾಗೂ ಹವಿಗನ್ನಡದಲ್ಲಿ ಇವರು ಬರೆದಿರುವ ಹಲವು ಕಥೆಗಳು ಜನಮನಸೂರೆಗೊಂಡಿದೆ. ತಲ್ಲಣಗಳ ಪಲ್ಲವಿ ಕಥಾಸಂಕಲನವು ಲೇಖಕಿಯ ಮೂರನೇ ಹೊತ್ತಗೆಯಾಗಿದ್ದು ಹನ್ನೆರಡು ವಿವಿಧ ವಸ್ತುಗಳನ್ನಾಯ್ದುಕೊಂಡ ಕಥೆಗಳ ಗುಚ್ಛವಾಗಿದೆ. ಗೃಹಿಣಿಯಾಗಿದ್ದರೂ ಪ್ರವೃತ್ತಿಯಾದ ನಾಟ್ಯ ತರಬೇತಿ ಹಾಗೂ ಇನ್ನಿತರ ರಂಗಗಳಲ್ಲಿ ತೊಡಗಿಕೊಂಡಿದ್ದರೂ ತಮ್ಮ ಬರವಣಿಯ ಹವ್ಯಾಸವನ್ನು ನಿರಂತರವಾಗಿ ಪೋಷಿಸಿಕೊಂಡು ಬಂದವರು.

ಗೋಪಾಲರಾಯರ ಕಿರಿಯ ಮಗನಾದ ಶಶಾಂಕ ತನ್ನ ಹೆಂಡತಿ, ಮಗನ ಜೊತೆ ಅಮೇರಿಕಾದಲ್ಲಿ ವಾಸವಾಗಿದ್ದ. ಅವನ ಅಣ್ಣ ಹಾಗೂ ಸಹೋದರಿಯರು ಭಾರತದ ಹಳ್ಳಿಯಲ್ಲಿ ಕೃಷಿಯನ್ನೇ ಜೀವಿತವಾಗಿರಿಸಿದವರು. ಅವನ ಅಣ್ಣ ಶಂಕರ್ ಹಳ್ಳಿಯ ಶಾಲೆಯಲ್ಲಿ ಮೇಸ್ಟ್ರಾಗಿದ್ದವನು. ಅಮೇರಿಕಾದಲ್ಲಿ ಆರ್ಥಿಕತೆಯ ಕುಸಿತದಿಂದ ಕೆಲಸ ಕಳೆದುಕೊಂಡ ಶಶಾಂಕನಿಗೆ ಊರಿನಲ್ಲಿನ ಜೀವನದ ಅನುಭವವಿರದೆ ಆತ ತೊಳಲಾಡುವ ಪರಿಯನ್ನು ಕಂಡು ಕೊನೆಗೆ ಅಣ್ಣನಾದ ಶಂಕರ್ ಆತನ ಬಾಳಿಗೆ ಬೆಳಕಾಗುವ ಪರಿಯನ್ನು ವಿವರಿಸುವ ಕಥೆಯೇ *ಜೀವಜಲ.*

ಮುದ್ದಾದ ಬೆಕ್ಕಿನ ಮರಿಯನ್ನು ಕಳೆದುಕೊಂಡ ಪ್ರಕಾಶನ ಪ್ರಾಣಿಪ್ರೇಮವನ್ನು ಹೆಣೆದಿರುವ ಕಥೆ ‘ಮರೆತೇನೆಂದರು ಮರೆಯಲಿ ಹ್ಯಾಂಗ’

ಕಲಿಸಿದ ಗುರುಗಳೇ ತಾವು ತಮ್ಮ ಜೀವನದಲ್ಲಿ ತಪ್ಪಾದ ಹೆಜ್ಜೆಗಳನ್ನೇ ಸರಿಯೆಂಬಂತೆ ಸಾಧಿಸುತ್ತಾ ತಮ್ಮ ಮಗಳ ಬಾಳನ್ನು ಕೈಯಾರೆ ನೋವಿಗೆ ದೂಡಿದ ಕಥೆಯೇ *ಆ ಮಾತು*

ತನ್ನ ಮಗ ಸರಿಯಿಲ್ಲವೆಂದು ತಿಳಿದೂ ಸಹ ಹಣದಿಂದ ಏನನ್ನಾದರೂ ಕೊಳ್ಳಬಹುದು ಎಂದುಕೊಂಡು ಸಾಮಾನ್ಯ ಮನೆತನದಿಂದ ಹೆಣ್ಣನ್ನು ತಂದು ಆಕೆಯನ್ನು ಹಿಂಸಿಸಿ ಮಾವನೇ ನೀಚನಾಗುವ ಸಮಯದಲ್ಲಿ ಗಂಡನ ಮನೆ ತೊರೆದು ಮಾತೃತ್ವದ ತನ್ನಾಸೆಯನ್ನು ತಂತ್ರಜ್ಞಾನದ ಮೂಲಕ ಈಡೇರಿಸಿಕೊಳ್ಳುವ ಕಥೆ *ಅನಾಘ್ರಾಣಿತ ಕುಸುಮ*

*ಶಾಂತಮ್ಮಾ* ಕಥೆಯಲ್ಲಿ ಹಳ್ಳಿಯನ್ನು ಬಹಳ ಹಿಂದೆ ವೇದನೆಯನ್ನು ತಡೆಯಲಾಗದೆ ತೊರೆದು ಹೋದರೂ ಅಲ್ಲಿನ ನಂಟನ್ನು ಬಿಡಲಾಗದೆ ಜೀವನ ಸಂಜೆಯ ಕಾಲದಲ್ಲಿ ಮತ್ತೆ ಹಳ್ಳಿಗೆ ಮರಳಿ ಅಲ್ಲೇ ಮರಣಿಸುವ ಚಿತ್ರಣವಿದೆ.

ಮನೆಯ ಕೆಲಸದವಳ ಮಗುವನ್ನೇ ತಮ್ಮದಾಗಿಸಿಕೊಂಡ ಗಂಡ, ಆ ವಿಚಾರವೇ ಅರಿಯದ ಆತನ ಹೆಂಡತಿ ಮನೆಯ ಕೆಲಸದವಳನ್ನು ತುಚ್ಛವಾಗಿ ಕಾಣುವ ಕಥೆಯೇ *ಯಶೋದೆ ಕೃಷ್ಣನಾ ಬೆಳೆಸಿದರೇನು* ತುಂಬಾ ಮನೋಜ್ಞವಾಗಿ ಮೂಡಿಬಂದಿದೆ.

ಜೀವನದಲ್ಲಿ ಸೋಲೇ ಕಾಣದಂತೆ ಸಂದೇಶನನ್ನು ಬೆಳೆಸಿ ಕೊನೆಗೆ ತಾನು ಶ್ರಮವಹಿಸಿ ದುಡಿದ ಕಂಪನಿಯಲ್ಲಿ ಮಡದಿಗೆ ಹಕ್ಕು ನೀಡಲು ಮನಸಿಲ್ಲದೇ ಆತ ಆತ್ಮಹತ್ಯೆಗೆ ಶರಣಾಗುವ ಕಥೆಯೇ *ಅವ್ಯಕ್ತ* . ತಂದೆ-ತಾಯಿ ತಮ್ಮ ಮಕ್ಕಳಿಗೆ ಗೆಲ್ಲುವುದರ ಜೊತೆಗೆ ಸೋಲುವುದನ್ನೂ ಅಭ್ಯಸಿಸಬೇಕು. ಇಲ್ಲವಾದರೆ ಅದರ ಪರಿಣಾಮವೇನಾಗುವುದೆಂಬ ನೀತಿ ಈ ಕಥೆಯಲ್ಲಿದೆ.

ಅವಳಿ ಮಕ್ಕಳನ್ನು ಪಡೆದಿದ್ದರೂ ಮಗಳು ಬೆನ್ನೆಲುಬಿಲ್ಲದೇ ಆಧಾರರಹಿತವಾಗಿದ್ದರಿಂದ ಆಕೆಯನ್ನು ತುಚ್ಛವಾಗಿ ಕಂಡು ಕೇರ್ ಟೇಕರ್ ನಲ್ಲಿ ಬಿಟ್ಟರೂ ಅವಳ ಜೊತೆ ಹುಟ್ಟಿದ ಅಣ್ಣ ತನ್ನ ತಂಗಿಯನ್ನು ಹೆತ್ತವರಿಗೆ ಅರಿಯದಂತೆ ಪೋಷಿಸಿ ಆಕೆಯನ್ನು ಬದುಕಿನಲ್ಲಿ ಸಮರ್ಥವಾಗಿಸುವ ಸುಂದರ ಕಥೆಯೇ *ಕುಮಾತಾ ನ ಭವತಿ*

ಯಕ್ಷಗಾನದ ಪಾತ್ರಧಾರಿಯಾಗಿ ಹಲವು ಎಡವಟ್ಟುಗಳ ಮಧ್ಯೆಯು ತನ್ನ ಮರಣದ ದಿನ ತಾನೊಬ್ಬ ಸಮರ್ಥ ಕಲಾವಿದನೆಂದು ಸಾಧಿಸಿದ ಕೇಚಣ್ಣನ ಕಥೆಯೇ *ಸಮರ್ಪಣೆ* ಮೊದಮೊದಲು ಹಾಸ್ಯವೆನಿಸಿ ನಗೆಗಡಲಲ್ಲಿ ಮುಳುಗಿಸಿದರೂ ಕೊನೆಗೆ ಕಣ್ಣಂಚಿನಲ್ಲಿ ಮೂಡುವ ಎರಡು ಹನಿಗಳನ್ನು ತಡೆಯಲಾಗದು.. ಅದುವೇ ಲೇಖಕಿಯ ಕಲೆಗಿರುವ ಶಕ್ತಿ..

ಅತ್ತಿಗೆಯಲ್ಲಿ ತಾಯಿಯನ್ನೇ ಕಾಣುವ ಸುಮನಾಳ ಕಥೆಯೇ *ನಾಲ್ಕು ದಿನದ ಈ ಬದುಕಿನಲೀ*

ಲೇಖಕಿ ಸ್ವತಃ ತಾನೊಬ್ಬ ಕಲಾವಿದೆಯಾಗಿ ಪುರಾಣಪಾತ್ರವನ್ನು ಕಥೆಯಾಗಿಸಿದ ಮಹತ್ತರವಾದ ಅಂಬೆಯ ಕಥೆಯೇ *ಜ್ವಾಲಾಮುಖಿ*

ಕಾಲೇಜಿನಿಂದಲೇ ಸ್ನೇಹವಿದ್ದರೂ ಅದು ಪ್ರೀತಿಯಾಗಿ ಹೇಳಿಕೊಳ್ಳುವ ಮೊದಲೇ ಗೆಳತಿಗೆ ಮದುವೆಯಾಗಿ ಆಕೆ ವಿಧವೆಯಾದ ಮೇಲೆ ಮತ್ತೆ ಆಕೆಯ ನೆನಪಿನಲ್ಲಿ ಮದುವೆಯಾಗದೆ ಕಾದ ಪ್ರಸನ್ನ ವಿಧವೆ ಜಯಶ್ರೀಯನ್ನು ವರಿಸಿ ಮತ್ತೆ ಬಾಳ ಪಯಣವನ್ನು ಸುಗಮವಾಗಿಸಿಕೊಂಡ ಕಥೆ *ಮತ್ತೆ ಹಾಡಿತು ಕೋಗಿಲೆ*

ಈ ಎಲ್ಲಾ ಕಥೆಗಳೂ ಒಂದಕ್ಕಿಂತ ಒಂದು ಭಿನ್ನವಾಗಿದ್ದು ಭಾವುಕತೆಯನ್ನು ತುಂಬಿ ಹೆಣೆಯಲ್ಪಟ್ಟಿವೆ. ಸಮಾಜದಲ್ಲಿ ನಡೆಯುವ ವಸ್ತುಸ್ಥಿತಿಯನ್ನು ಸರಳವಾಗಿ ಸುಂದರವಾಗಿ ಕಥೆಯಾಗಿಸಿದ ಈ ಕಥಾಸಂಕಲದ ಪ್ರತಿ ಕಥೆಯೂ ಆಪ್ತವೆನ್ನಿಸುವುದು ಅದರ ನಿರೂಪಣೆಯಿಂದ..

ಡಾ. ಹರಿಕೃಷ್ಣ ಭರಣ್ಯರವರ ಮುನ್ನುಡಿ, ಶ್ರೀಮತಿ ಪ್ರಸನ್ನಾ ವಿ. ಚೆಕ್ಕೆಮನೆಯವರ ಬೆನ್ನುಡಿಯಿರುವ *ತಲ್ಲಣಗಳ ಪಲ್ಲವಿ* ಯಲ್ಲಿರುವ ರಸಾಸ್ವಾದವನ್ನು ಓದಿಯೇ ಸವಿಯಬೇಕು. ಲೇಖಕಿಯವರಿಂದ ಮತ್ತಷ್ಟು ಉತ್ಕೃಷ್ಟ ಬರಹಗಳು ಹೊರಹೊಮ್ಮಲಿ ಎಂಬ ಹಾರೈಕೆ ನನ್ನದು.. ●

# ಶೌಚಾಲಯ ನಿರ್ಮಾಣ ಚರ್ಚಿಸಲು ಪಂ. ಅಧಿಕೃತರಿಗಿಲ್ಲ ಪುರುಸೊತ್ತು...!

## ಓದುಗರ ಪತ್ರ

ಪ್ರತಿಯೊಬ್ಬ ಮನುಷ್ಯನೂ ಕೂಡಾ ತನ್ನ ಹಸಿವನ್ನು ನೀಗಿಸುವುದಕ್ಕೋಸ್ಕರ ಹೊಟ್ಟೆ ತುಂಬಾ ತಿನ್ನಲೂ, ಕುಡಿಯಲೂ ಬೇಕು. ತಿಂದ ಮೇಲೆ ಅದನ್ನು ಜೀರ್ಣಿಸಿಕೊಂಡು ದ್ರವರೂಪದಲ್ಲೋ, ಘನರೂಪದಲ್ಲೋ ವಿಸರ್ಜಿಸಲೇಬೇಕು. ಇದು ಪ್ರಕೃತಿ ನಿಯಮವಾಗಿದೆ. ಒಂದು ವೇಳೆ, ತಿಂದ ಆಹಾರವನ್ನು ಯಾವ ಮನುಷ್ಯನು ವಿಸರ್ಜಿಸುವುದಿಲ್ಲವೋ ವಿಸರ್ಜಿಸುವುದನ್ನು ತಡೆಹಿಡಿಯುವುದೋ ಮಾಡಿದಲ್ಲಿ ಆತನ ದೇಹದೊಳಗೆ ರೋಗವು ಉತ್ಪತ್ತಿಯಾಗುತ್ತದೆ. ಈ ಮೂಲಕ ಮನುಷ್ಯನು ಅನಾರೋಗ್ಯಕ್ಕೆ ಒಳಗಾಗುತ್ತಾನೆ. ರೋಗಮುಕ್ತನಾಗಲು ವೈದ್ಯರ ಬಳಿಗೆ ಓಡಬೇಕಾಗುತ್ತದೆ. ಹಾಗೆಯೇ ಚಿಕಿತ್ಸೆಗಾಗಿ ಹಣ ಸುರಿಯಲೇಬೇಕಾಗುತ್ತದೆ. ಹೀಗಾಗಿ ತಿಂದ ಆಹಾರವನ್ನು ಜೀರ್ಣಿಸಿ ವಿಸರ್ಜಿಸುವುದಕ್ಕೋಸ್ಕರ ವೈಯಕ್ತಿಕವಾಗಿ ಮನೆಗಳಲ್ಲೂ, ಸಾರ್ವಜನಿಕವಾಗಿ ಹಳ್ಳಿ, ಪೇಟೆಗಳಲ್ಲೂ ಸಾರ್ವಜನಿಕ ಶೌಚಾಲಯಗಳನ್ನು ಸ್ಥಾಪಿಸಿ ಪರಿಸರ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರಲು ಮನುಷ್ಯನು ಪ್ರಯತ್ನಿಸುತ್ತಿರುತ್ತಾನೆ.

ಭಾರತದಲ್ಲಿ ಹಿಂದಿನ ಕಾಲದಲ್ಲಿ ಜನಸಾಮಾನ್ಯರು ಎಲ್ಲೆಂದರಲ್ಲಿ ಬಹಿರ್ದೆಸೆಗೆ ಕುಳಿತುಕೊಳ್ಳುವುದು ಸರ್ವ ಸಾಮಾನ್ಯವಾಗಿತ್ತು. ಆದರೆ ಸುಮಾರು 8 ವರ್ಷಗಳ ಹಿಂದೆ ಸಾಮಾನ್ಯರಲ್ಲಿ ಸಾಮಾನ್ಯನಾಗಿದ್ದುಕೊಂಡು ರೈಲ್ವೇ ನಿಲ್ದಾಣದಲ್ಲಿ ಚಹಾ ಮಾರುತ್ತಿದ್ದ ವ್ಯಕ್ತಿಯೊಬ್ಬರು ಭಾರತದ ಪ್ರಧಾನಿಗಳಾಗಿ ಅಧಿಕಾರ ಸ್ವೀಕರಿಸಿದಲ್ಲಿಂದ ಭಾರತಕ್ಕೆ ಶುಕ್ರದೆಸೆ ಆರಂಭವಾಯಿತು. ನಮ್ಮ ದೇಶದ ಮುಖಚ್ಛಾಯೆಯೇ ಬದಲಾಯಿತು. ರಾಷ್ಟ್ರ ಪಿತ ಮಹಾತ್ಮಾ ಗಾಂಧೀಜಿಯವರ ಜನ್ಮದಿನದಂದು ಬಯಲು ಮುಕ್ತ ಶೌಚಾಲಯ ಯೋಜನೆಯನ್ನು ಘೋಷಿಸಿದರು. ಪ್ರತೀ ಮನೆ, ಹಳ್ಳಿ, ನಗರಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಒತ್ತು ನೀಡಿದರು.

ಸುಮಾರು 8 ವರ್ಷಗಳ ಹಿಂದೆ ಕುಂಬಳೆ ಪೇಟೆಯಲ್ಲಿ ಬಸ್ ತಂಗುದಾಣವೊಂದಿತ್ತು. ಅದಕ್ಕೆ ಹೊಂದಿಕೊಂಡು ಎರಡು ಶೌಚಾಲಯಗಳು ಕಾರ್ಯವೆಸಗುತ್ತಿತ್ತು. ಪೇಟೆಯ ಅಭಿವೃದ್ಧಿಯ ಹೆಸರಿನಲ್ಲಿ ಸದ್ರಿ ಬಸ್ ತಂಗುದಾಣವನ್ನು ಕೆಡವಲಾಯಿತು. ಪೆರ್ಲ, ಮುಳ್ಳೇರಿಯ, ಬದಿಯಡ್ಕ, ಸೀತಾಂಗೋಳಿ, ಕಾಸರಗೋಡು ಪ್ರದೇಶಗಳಿಂದ ಬರುತ್ತಿದ್ದ ಸಾವಿರಾರು ಜನಸಾಮಾನ್ಯರು ಪ್ರಯೋಜನ ಪಡಕೊಳ್ಳುತ್ತಿದ್ದ ಶೌಚಾಲಯವೂ ಕೂಡಾ ಸ್ವಾಭಾವಿಕವಾಗಿ ಧರಾಶಾಯಿಯಾಯಿತು. ಅದೇ ಸ್ಥಳದಲ್ಲಿ ತಾತ್ಕಾಲಿಕ ಬಸ್ ತಂಗುದಾಣ ನಿರ್ಮಿಸಿದರೂ ಶೌಚಾಲಯ ನಿರ್ಮಾಣದ ಬಗ್ಗೆ ಕುಂಬಳೆ ಪಂಚಾಯತ್ ಅಧಿಕೃತರು ಯೋಚಿಸಲೇ ಇಲ್ಲ. ಬಸ್ ಪ್ರಯಾಣಿಕರು, ಅದರಲ್ಲೂ ಮಹಿಳಾ ಪ್ರಯಾಣಿಕರು ಶೌಚಾಲಯದ ವ್ಯವಸ್ಥೆ ಇಲ್ಲದ್ದರಿಂದ ಕುಂಬಳೆ ಪಂಚಾಯತ್ ಅಧಿಕೃತರಿಗೆ ಮನಸ್ಸಿನಲ್ಲಿಯೇ ಹಿಡಿಶಾಪ ಹಾಕುತ್ತಾ ಕುಂಬಳೆಯಿಂದ ತಮ್ಮ ಪ್ರಯಾಣವನ್ನು ಮುಂದುವರಿಸುತ್ತಾರೆ.

2020ರಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಚುನಾವಣೆ ನಡೆದು ಹೊಸ ಆಡಳಿತ ಸಮಿತಿ ಅಧಿಕಾರಕ್ಕೆ ಬಂತು. ಸದ್ರಿ ಬಸ್ ನಿಲ್ದಾಣವಿರುವ ಪ್ರದೇಶವು ಇಪ್ಪತ್ತಮೂರನೇ ವಾರ್ಡಿಗೆ ಒಳಪಡುತ್ತದೆ. ಸದ್ರಿ ವಾರ್ಡನ್ನು ಪ್ರತಿನಿಧಿಕರಿಸುತ್ತಿರುವ ಪಂಚಾಯತ್ ಸದಸ್ಯೆಯಾದ ಪ್ರೇಮಾವತಿಯವರು ಹಲವಾರು ಬಾರಿ ಪಂಚಾಯತ್ ಅಧಿಕೃತರ ಬಳಿ ಸದ್ರಿ ಸ್ಥಳದಲ್ಲಿ ತಾತ್ಕಾಲಿಕ ಶೌಚಾಲಯದ ನಿರ್ಮಾಣದ ಬಗ್ಗೆ ಗಮನ ಸೆಳೆದಿದ್ದರು. ಆದರೆ ಪಂಚಾಯತ್ ಆಡಳಿತ ಸಮಿತಿಯು ಅವರ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಕ್ಯಾರೇ ಅನ್ನಲಿಲ್ಲ. ಕೊನೆಗೆ ಬೇಸತ್ತು ಅವರು ಪ್ರತೀ ತಿಂಗಳು ನಡೆಯುವ ಆಡಳಿತ ಸಮಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ಕಾರ್ಯಸೂಚಿ (ಅಜೆಂಡಾ)ಯಲ್ಲಿ ಈ ವಿಷಯವನ್ನು ಸೇರ್ಪಡೆಗೊಳಿಸಲು ಮೂರು ತಿಂಗಳ ಹಿಂದೆ ಲಿಖಿತ ಪತ್ರವನ್ನು ಪಂ. ಕಾರ್ಯದರ್ಶಿಗಳಿಗೆ ನೀಡಿದರು. ಪತ್ರ ನೀಡಿದ ಬಳಿಕ ಹಲವು ಬಾರಿ ಸಾಮಾನ್ಯ ಸಭೆ ನಡೆದರೂ ಈ ವಿಷಯವನ್ನು ಪಂ. ಅಧಿಕೃತರು ಅಜಂಡದಲ್ಲಿ ಸೇರಿಸಲೇ ಇಲ್ಲ.

ಕುಂಬಳೆ ಪೇಟೆಯಲ್ಲಿ ಬಸ್ ನಿಲ್ದಾಣವಿರುವ ಸ್ಥಳದಲ್ಲಿ ತಾತ್ಕಾಲಿಕ ಶೌಚಾಲಯ ನಿರ್ಮಾಣದ ವಿಷಯವನ್ನು ಚರ್ಚಿಸಲು ಪಂ. ಅಧಿಕೃತರಿಗೆ ಪುರುಸೊತ್ತೇ ಇಲ್ಲ. ಈ ಹಿಂದೆ ಒಂದು, ಎರಡು ಅಜಂಡಗಳನ್ನಿಟ್ಟುಕೊಂಡು ಸಭೆ ಸೇರಿದ ಉದಾಹರಣೆಗಳು ಸಾಕಷ್ಟಿವೆ. ಆದರೆ ಶೌಚಾಲಯ ನಿರ್ಮಾಣ ಜನಸಾಮಾನ್ಯರಿಗೆ ಅತೀ ಅಗತ್ಯದ ವಿಷಯವೆಂದು ಪಂ. ಅಧಿಕೃತರಿಗೆ ಅನ್ನಿಸುವುದೇ ಇಲ್ಲ. ಪಂಚಾಯತ್ ಸದಸ್ಯರೇ ಲಿಖಿತ ಪತ್ರ ನೀಡಿದರೂ ಪರಿಗಣಿಸದ ಪಂ. ಅಧಿಕೃತರಿಗೆ ಜನಸಾಮಾನ್ಯರ ಬೇಡಿಕೆ ಅಂಗೀಕರಿಸಲು ಸಮಯವಿದ್ದೀತೇ? ಇನ್ನಾದರೂ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಶೌಚಾಲಯ ನಿರ್ಮಾಣ ಅದು ಕೂಡಾ ಕುಂಬಳೆ ಪೇಟೆಯ ಹೃದಯ ಭಾಗದಲ್ಲಿ ನಿರ್ಮಿಸಲು ಪಂ. ಅಧಿಕೃತರಿಗೆ ಹೃದಯ ವೈಶಾಲ್ಯತೆ ಉಂಟಾದೀತೇ? ಬಸ್ ಪ್ರಯಾಣ ನಡೆಸುವ ಪ್ರಯಾಣಿಕರ ಅದರಲ್ಲೂ ಮಹಿಳಾ ಪ್ರಯಾಣಿಕರ ಸಂಕಷ್ಟಗಳನ್ನು ಪರಿಹರಿಸುವ ಮಾನವೀಯತೆಯನ್ನು ಕುಂಬಳೆ ಪಂಚಾಯತ್ ಆಡಳಿತ ಸಮಿತಿ ತೋರಿಸೀತೇ?

– ಬಿ. ಸುಬ್ರಹ್ಮಣ್ಯ ನಾಯಕ್, ಕುಂಬಳೆ

## ಮಕ್ಕಳಿಗಾಗಿ



–ಅಶ್ವಿತ, 10ನೇ ತರಗತಿ, ಜಿಎಚ್‌ಎಸ್‌ಎಸ್, ಪೈವಳಿಕೆನಗರ



–ಯಶ್ವಿತ್ ಪಿ., 10ನೇ ತರಗತಿ, ಜಿಎಚ್‌ಎಸ್ ಸೂರಂಬೈಲು



–ಆದಿತ್ಯ ಎಸ್. 7ನೇ ತರಗತಿ, ಜಿಎಚ್‌ಎಸ್ ಸೂರಂಬೈಲು